ರಾಜ್ಯದಲ್ಲಿ ಅನುದಾನ ಸಂಹಿತೆಗೊಳಪಟ್ಟ ವೃತ್ತಿಪರ ಕಾಲೇಜುಗಳು

೨೫೬. ಶ್ರೀ ಎಂ. ರಾಮಪ್ಪ (ಬಳ್ಳಾರಿ).— ಮಾನ್ಯ ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ರಾಜ್ಯದಲ್ಲಿ ಅನುದಾನ ಸಂಹಿತೆಗೊಳಪಟ್ಟ ಎಷ್ಟು ವೃತ್ತಿಪರ ಕಾಲೇಜುಗಳಿವೆ ?

೨) ಸದರಿ ಕಾಲೇಜುಗಳ ಪ್ರವೇಶಗಳಲ್ಲಿ ಮೆರಿಟ್ ಆಧಾರದನ್ವಯ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗುತ್ತಿದೆಯೇ ?

೩) ಈ ಕಾಲೇಜಂಗಳಲ್ಲಿ ೧೯೮೯ನೇ ಸಾಲಿನಲ್ಲಿ ಎಷ್ಟು ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ ? (ಕಾಲೇಜುವಾರು ವಿವರ ಒದಗಿಸುವುದು)

೪) ಈಗ ಜಾರಿಯಲ್ಲಿರುವ ನಿಯಮಾನುಸಾರ ಈ ರೀತಿ ಪ್ರವೇಶ ನೀಡಲು ಅವಕಾಶವಿದೆಯೆ ? ಹಾಗಿಲ್ಲದಿದ್ದಲ್ಲಿ, ಈ ರೀತಿಯ ಅಕ್ರಮ ಪ್ರವೇಶ ನೀಡಿರುವ ಕಾಲೇಜುಗಳ ಮೇಲೆ, ಸರ್ಕಾರ ಏನು ಕ್ರಮ ಕೈಗೊಳ್ಳಲು ಉದ್ದೇಶಿಸಿದೆ ?

ಶ್ರೀ ಕೆ. ಎಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಅರಣ್ಯ ಮತ್ತು ಶಿಕ್ಷಣ ಮಂತ್ರಿಗಳು).—

೧) ರಾಜ್ಯದಲ್ಲಿ ಒಟ್ಟು ೧೧ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಿವೆ. ೨೪ ಬಿ. ಎಡ್, ಕಾಲೇಜುಗಳು, ೫ ಲಾ ಕಾಲೇಜಂಗಳು ಅನುದಾನ ಸಂಹಿತೆಗೆ ಒಳಪಟ್ಟಿವೆ. ರಾಜ್ಯದಲ್ಲಿ ಯಾವ ಬಿ.ಪಿ.ಎಡ್. ಕಾಲೇಜಿಗೂ ಅನುದಾನ ನೀಡಲಾಗುತ್ತಿಲ್ಲ.

೨) ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಮಾತ್ರ, ಸರ್ಕಾರದ ರೋಸ್ಟರ್ ಪದ್ಧತಿಯನ್ವಯ ಮೆರಿಟ್ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತಿದೆ. ಅನುದಾನಿತ ಬಿ.ಎಡ್. ಕಾಲೇಜುಗಳ ಪ್ರವೇಶ ನಿಯಮಾವಳಿಗಳಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಲು ಅವಕಾಶವಿದೆ. ಪ್ರವೇಶಗಳನ್ನು ಆಡಳಿತ ಮಂಡಳಿಯವರೇ ಮಾಡಿಕೊಳ್ಳುತ್ತಾರೆ. ಲಾ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳ ಕುಲಪತಿಯನ್ವಯ ಪ್ರವೇಶ ಮಾಡಲಾಗುತ್ತಿದ್ದು, ವಿಶೇಷವಾಗಿ ಅವಕಾಶ ವಿರುತ್ತದೆ.

೩) ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ೧೯೮೯ನೇ ಸಾಲಿನಲ್ಲಿ ಒಟ್ಟು ೬೬೮ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. (ಕಾಲೇಜುವಾರು ವಿವರ ಲಗತ್ತಿಸಿದೆ).

೪) ಅವಕಾಶವಿದೆ.

ಖಾಸಗಿ ಕಾಲೇಜುಗಳಲ್ಲಿ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ನೀಡಲಾಗಿರುವ ಪ್ರವೇಶಗಳ ಬಗ್ಗೆ ಕಾಲೇಜುವಾರು ವಿವರಗಳು

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	೧೯೮೯ನೇ ಸಾಲಿನಲ್ಲಿ ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ನೀಡಲಾಗಿರುವ ಪ್ರವೇಶ ಸಂಖ್ಯೆ
೧.	ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು	೧೫೬
೨.	ಬಿ.ಎಂ.ಎಸ್. (ಸಂಜೆ) ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು	೦೨
೩.	ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಮೈಸೂರು	೭೩
೪.	ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಸಂಜೆ), ಮೈಸೂರು	೦೧
೫.	ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್, ಮೈಸೂರು	೫೭
೬.	ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ (ಸಂಜೆ), ಮೈಸೂರು	೦೬
೭.	ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು, ಮಂಡ್ಯ	೭೦
೮.	ಮಲ್ನಾಡ್ ಇಂಜಿನಿಯರಿಂಗ್ ಕಾಲೇಜು, ಹಾಸನ	೭೨
೯.	ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜು, ಹುಬ್ಬಳ್ಳಿ	೮೮
೧೦.	ಬಸವೇಶ್ವರ ಇಂಜಿನಿಯರಿಂಗ್ ಕಾಲೇಜು, ಬಾಗಲಕೋಟೆ	೪೧
೧೧.	ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜು, ಗುಲ್ಬರ್ಗ	೧೦೨
	ಒಟ್ಟು	೬೬೮

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ರಾಜ್ಯ ಬೀಜ ನಿಗಮದ ಅವ್ಯವಹಾರದ ಬಗ್ಗೆ

೩೬೬. ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ),—ಮಾನ್ಯ ವ್ಯವಸಾಯ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ಬೀಜ ನಿಗಮವು ೧೯೮೫-೮೬ ಮತ್ತು ೧೯೮೬-೮೭ನೆಯ ಸಾಲಿನಲ್ಲಿ ಖರೀದಿಸಿದ ಮತ್ತು ಮಾರಾಟ ಮಾಡಿದ ಡಿ.ಸಿ. ಹೆಚ್.-೩ ಬೀಜದ ಪ್ರಮಾಣ ಎಷ್ಟು ?

ಆ) ನೇರವಾಗಿ ರೈತರಿಗೆ ಮತ್ತು ವಿತರಕರ, ಮಧ್ಯಾಂತರ ಎಷ್ಟು ಹತ್ತಿ ಬೀಜ ಮಾರಾಟ ಮಾಡಲಾಗಿದೆ ?

ಇ) ನಿಗಮವು ೧೯೮೬ ರಿಂದ ೧೯೮೯ನೇ ಸಾಲಿನವರೆಗೆ ಸೂರ್ಯ ಕಾಂತಿ ಬೀಜವನ್ನು ಎಷ್ಟು ಖರೀದಿ ಮಾಡಲಾಗಿದೆ ?

ಈ) ಬೀಜ ಉತ್ಪಾದನೆಯಿಂದ ಎಷ್ಟು ಪ್ರಮಾಣ ಖರೀದಿಸಲಾಗಿದೆ ಮತ್ತು ನೇರವಾಗಿ ಎಷ್ಟು ಖರೀದಿ ಮಾಡಲಾಗಿದೆ, ನೇರವಾಗಿ ಖರೀದಿಸಲು ಯಾವ ವಿಧಾನವನ್ನು ಅನುಸರಿಸಲಾಗಿದೆ ?